ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 1, July-August, 2023, Pp. 41-49
©*IIMRD*, Mysuru

IIMRD JOURNALS

www.iimrd.com

# ಮಾತೃ ಪ್ರಧಾನತೆ: ಚರ್ಚೆಯ ವಿವಿಧ ನೆಲೆಗಳು

**ಡಾ. ವಿಜಯಲಕ್ಷ್ಮಿ ಆರ್***

*ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಣೇಬೆನ್ನೂರು

**ಸಾರಾಂಶ: (Abstract)**

*ಮಾತೃ ಪ್ರಧಾನತೆ ಎಂಬ ಸಂಕಥನವನ್ನು ರೂಪಿಸಿದವರು ಮತ್ತು ಅದಕ್ಕೆ ಒಂದು ತಾತ್ವಿಕ ಚೌಕಟ್ಟನ್ನು ಕಲ್ಪಿಸಿದವರು ಮಾರ್ಕ್ಸ್‌ವಾದಿ ಚರಿತ್ರೆಕಾರರು. ಅದಕ್ಕೂ ಮುನ್ನ 'ಲೂಯಿ ಎಚ್. ಮಾರ್ಗನ್', ಎಂಬ ಅಮೇರಿಕಾದ ವಿದ್ವಾಂಸ ತನ್ನ 'Ancient Society' (1877) ಎಂಬ ಪುಸ್ತಕದಲ್ಲಿ ಮಾತೃ ಪ್ರಧಾನತೆಯನ್ನು ಕುರಿತು ಪ್ರಸ್ತಾಸಿದ್ದಾರೆ. ಮಾರ್ಗನ್ನರ ಕೃತಿಯೊಳಗಿನ ಪ್ರಸ್ತಾಪವನ್ನು ಸೈದ್ಧಾಂತಿಕವಾಗಿ ನಿರೂಪಿಸಿದವರು ಫ್ರೆಡರಿಕ್ ಎಂಗೆಲ್ಸ್. ಎಂಗೆಲ್ಸ್ 'The Origin of the Family, Private Property and the State' ಕೃತಿಯಲ್ಲಿ ಕುಟುಂಬದ ರಚನೆಯ ಜೊತೆಗೆ ಮಾನವನ ಸಾಮಾಜಿಕ ಸಂಸ್ಥೆಗಳ ವಿಕಾಸದ ಕುರಿತು ಚರ್ಚಿಸುತ್ತಾರೆ. ಎಂಗೆಲ್ಸ್ ಈ ಕೃತಿ ರಚನೆಗೆ ಮಾರ್ಗನ್ನರ ಜೊತೆ ಬಾಹೋಫೆನ್ ಅವರನ್ನು ಉಲ್ಲೇಖಿಸುತ್ತಾರೆ. ಬಾಹೋಫೆನ್ ಸ್ವೀಡನ್ನಿನ ಚರಿತ್ರೆಕಾರ. ಇವರು ಪ್ರಾಚೀನ ಧಾರ್ಮಿಕ ಪರಿಸರದಿಂದ ರೂಪುಗೊಂಡು ಪ್ರಚಲಿತವಾದ ಸಾಮಾಜಿಕ ಬದ್ಧತೆ ಮತ್ತು ಹಕ್ಕುಗಳನ್ನು ಪ್ರಧಾನವಾಗಿಟ್ಟುಕೊಂಡು ಮಾಡಿದ ಸಂಶೋಧನೆಯನ್ನು 'ಮಾತೃ ಅಧಿಕಾರ' ಎಂಬ ಕೃತಿಯಲ್ಲಿ ಪ್ರಕಟಿಸಿದ್ದಾರೆ.*

**ಮುಖ್ಯಪದಗಳು (Keywords):** ಕುಟುಂಬ ವ್ಯವಸ್ಥೆ, ಮಾತೃಪ್ರಧಾನ, ಪಿತೃಪ್ರಧಾನ, ಅನ್ಸಿಯೆಂಟ್ ಸೊಸೈಟಿ, ಎಲ್.ಎಚ್. ಮಾರ್ಗನ್.

## ಪೀಠಿಕೆ

ಯಾವುದೇ ಒಂದು ಸಮುದಾಯದ ಒಂದು ಗುಂಪು ರಕ್ತಸಂಬಂಧ ವ್ಯವಸ್ಥೆಗೆ ಬದ್ಧವಾಗಿದೆ, ಇದರಲ್ಲಿ ಪೂರ್ವಜರ ಮೂಲವನ್ನು ತಂದೆಯ ರೇಖೆಗಳ ಬದಲಿಗೆ ತಾಯಿಯ ಮೂಲಕ ಕಂಡುಹಿಡಿಯಲಾಗುತ್ತದೆ (ಎರಡನೆಯದನ್ನು ಪಿತೃವಂಶ ಅಥವಾ ಪಿತೃತ್ವ ಎಂದು ಕರೆಯಲಾಗುತ್ತದೆ). ಪ್ರತಿ ಸಮಾಜವು ತನ್ನ ರಕ್ತಸಂಬಂಧವನ್ನು ಲೆಕ್ಕಹಾಕುವ ವ್ಯವಸ್ಥೆಯಲ್ಲಿ ಕೆಲವು ಮೂಲಭೂತ ಅಂಶಗಳನ್ನು ಸಂಯೋಜಿಸುತ್ತದೆ: ಕುಟುಂಬ, ಮದುವೆ, ಮದುವೆಯ ನಂತರದ ನಿವಾಸ, ಕೆಲವು ವರ್ಗಗಳ ಬಂಧುಗಳು, ವಂಶಸ್ಥರು ಮತ್ತು ಸಂಬಂಧಿಕರನ್ನು ಲೇಬಲ್ ಮಾಡಲು ಬಳಸುವ ನಿಯಮಗಳ ನಡುವೆ ಲೈಂಗಿಕ ಸಂಬಂಧಗಳನ್ನು (ಮತ್ತು ಆದ್ದರಿಂದ ಮದುವೆ) ನಿಷೇಧಿಸುವ ನಿಯಮಗಳು. ಒಂದು ವಂಶಸಾಮಾನ್ಯ ಪೂರ್ವಜರಿಂದ ವಂಶಸ್ಥರನ್ನು

ಪತ್ತೆಹಚ್ಚುವ ವ್ಯಕ್ತಿಗಳ ಗುಂಪು; ಹೀಗಾಗಿ, ಮಾತೃವಂಶದಲ್ಲಿ, ವ್ಯಕ್ತಿಗಳು ಸ್ತ್ರೀ ವಂಶಾವಳಿಯ ಮೂಲಕ ಸಂಬಂಧಿಕರಂತೆ ಸಂಬಂಧ ಹೊಂದಿದ್ದಾರೆ.

'ಲೂಯಿ ಎಚ್. ಮಾರ್ಗನ್', ಎಂಬ ಅಮೇರಿಕಾದ ವಿದ್ವಾಂಸ ತನ್ನ 'Ancient Society' (1877) ಎಂಬ ಪುಸ್ತಕದಲ್ಲಿ ಮಾತೃ ಪ್ರಧಾನತೆಯನ್ನು ಕುರಿತು ಪ್ರಸ್ತಾಸಿದ್ದಾರೆ. ಮಾರ್ಗನ್ನರ ಕೃತಿಯೊಳಗಿನ ಪ್ರಸ್ತಾಪವನ್ನು ಸೈದ್ಧಾಂತಿಕವಾಗಿ ನಿರೂಪಿಸಿದವರು ಫ್ರೆಡರ್ರಿಕ್ ಎಂಗೆಲ್ಸ್. ಎಂಗೆಲ್ಸ್ 'The Origin of the Family, Private Property and the State' ಕೃತಿಯಲ್ಲಿ ಕುಟುಂಬದ ರಚನೆಯ ಜೊತೆಗೆ ಮಾನವನ ಸಾಮಾಜಿಕ ಸಂಸ್ಥೆಗಳ ವಿಕಾಸದ ಕುರಿತು ಚರ್ಚಿಸುತ್ತಾರೆ. ಮಾರ್ಗನ್ ಮತ್ತು ಬಹೋಫೆನ್ನರ ಕೃತಿಗಳ ವಿವರಗಳನ್ನು ಇಟ್ಟುಕೊಂಡು ಮಾನವ ಸಮಾಜದ ಚಾರಿತ್ರಿಕ ಬೆಳವಣಿಗೆಯನ್ನು ನೋಡುವ ಹೊಸ ದೃಷ್ಟಿಕೋನವನ್ನು ಎಂಗೆಲ್ಸ್ ರೂಪಿಸಿದರು. ಅದನ್ನು ಚಾರಿತ್ರಿಕ ಭೌತವಾದವೆಂದು ಕರೆಯುತ್ತಾರೆ. ಗತಿ ತಾರ್ಕಿಕ ನೆಲೆಯಲ್ಲಿ ಮಾನವನ ಸಾಮಾಜಿಕ ಸಂಸ್ಥೆಗಳ ವಿಕಾಸವನ್ನು ಎಂಗೆಲ್ಸ್ ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಚಾರಿತ್ರಿಕ ಭೌತವಾದವು, ಉತ್ಪಾದನಾ ಸಾಧನಗಳ ವಿಕಾಸವು ಉತ್ಪಾದನಾ ಸಂಬಂಧಗಳನ್ನು ನಿರ್ಣಾಯಕವಾಗಿ ರೂಪಿಸುತ್ತದೆ. ಹೀಗೆ ಕಾಲದಿಂದ ಕಾಲಕ್ಕೆ ಉತ್ಪಾದನಾ ಸಂಬಂಧಗಳಲ್ಲಿ ಆದ ಬದಲಾವಣೆಗಳೇ ಚರಿತ್ರೆಯನ್ನು ರೂಪಿಸುತ್ತಾ ಬಂದಿವೆ. ಈ ಕಾರಣದಿಂದ ಉತ್ಪಾದನಾ ಶಕ್ತಿಗಳೇ ಚರಿತ್ರೆಯನ್ನು ನಿರ್ಮಿಸುತ್ತವೆ ಎಂಬುದು ಚಾರಿತ್ರಿಕ ಭೌತವಾದದ ನಿಲುವು. ಎಂಗೆಲ್ಸ್‌ರ ಈ ಕೃತಿ ಭಾರತದ ಮಾರ್ಕ್ಸ್‌ವಾದಿ ಚರಿತ್ರೆಕಾರರನ್ನು ಇನ್ನಿಲ್ಲದಂತೆ ಪ್ರಭಾವಿಸಿದೆ. ಧರ್ಮಾನಂದ ಕೋಸಂಬಿ, ಡಿ.ಡಿ. ಕೋಸಂಬಿ, ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಶ್ರೀಪಾದ ಅಮೃತ ಢಾಂಗೆ, ಭಗವತ್ ಶರಣ ಉಪಾಧ್ಯಾಯ ಮತ್ತು ರೋಮಿಲಾ ಥಾಪರ್ ಮುಂತಾದ ಚರಿತ್ರೆಕಾರರನ್ನು ಎಂಗೆಲ್ಸ್‌ರ ಈ ಕೃತಿ ನಿರ್ಣಾಯಕವಾಗಿ ಪ್ರಭಾವಿಸಿದೆ.

ಚಾರಿತ್ರಿಕ ಭೌತವಾದದ ನೆಲೆಯಲ್ಲಿ ಭಾರತದ ಚರಿತ್ರೆಯನ್ನು ಕೋಸಾಂಬಿ, ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಅಮೃತ್ ಢಾಂಗೆ ಮತ್ತು ರೋಮಿಲಾ ಥಾಪರ್ ನಿರೂಪಿಸುತ್ತಾ ಬಂದಿದ್ದಾರೆ. ಈ ಎಲ್ಲ ಚರಿತ್ರೆಕಾರರ ಬರಹಗಳು ಆಹಾರ ಸಂಗ್ರಹಣೆಯ ಹಂತದಿಂದ ಕೃಷಿ ಹಂತದವರೆಗೆ ಸ್ತ್ರೀ ಪ್ರಧಾನತೆ ಮತ್ತು ಮಾತೃ ಅಧಿಕಾರವು ಮಾನವ ಸಮಾಜದಲ್ಲಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಎಂಗೆಲ್ಸ್ ತಮ್ಮ ಕೃತಿಯಲ್ಲಿ ಬಾಹೋಫೆನ್ನರನ್ನು ಹೀಗೆ ಉಲ್ಲೇಖಿಸುತ್ತಾರೆ.

1. ಆರಂಭದಲ್ಲಿ ಮಾನವ ಕುಲವು ಲೈಂಗಿಕ ಸ್ವಚ್ಛಂದತೆಯ ಸ್ಥಿತಿಯಲ್ಲಿ ಬಾಳುತ್ತಿದ್ದಿತು.
2. ಇಂತಹ ಲೈಂಗಿಕ ಸ್ವಚ್ಛಂದತೆ ಇದ್ದುದರಿಂದ ಯಾವುದೇ ಮಗುವಿನ ತಂದೆ ಯಾರೆಂದು ಖಂಡಿತವಾಗಿ ಹೇಳುವುದು ಸಾಧ್ಯವಿರಲಿಲ್ಲ. ಆದ್ದರಿಂದ ವಂಶಾವಳಿಯನ್ನು ತಾಯಿಯ ಮೂಲಕವಷ್ಟೇ ಮಾತೃ ಅಧಿಕಾರದ ಪ್ರಕಾರ ಎಣಿಸಲಾಗುತ್ತಿದ್ದಿತು. ಆದಿಯಲ್ಲಿ ಎಲ್ಲ ಪ್ರಾಚೀನ ಜನತೆಗಳ ಮಧ್ಯೆಯು ಇದೇ ಪರಿಸ್ಥಿತಿ ಇದ್ದಿತು.
3. ತತ್ಫಲವಾಗಿ, ತಾಯಂದಿರಾಗಿ ಸ್ತ್ರೀಯರೇ ಯುವ ಪೀಳಿಗೆಯ ಖಂಡಿತವಾಗಿ ಹೇಳಬಹುದಾದಂತ ಜನ್ಮದಾತೃಗಳಾಗಿದ್ದರು. ಅವರನ್ನು ತುಂಬಾ ಗೌರವ ಆದರಗಳಿಂದ ನೋಡಲಾಗುತ್ತಿದ್ದಿತು.

4. ಹೆಂಗಸೊಬ್ಬಳು ಪ್ರತ್ಯೇಕವಾಗಿ ಒಬ್ಬನೇ ಗಂಡಸಿಗೆ ಸೇರಿರುವ ಏಕಪತ್ನೀತ್ವ ಪದ್ಧತಿಗೆ ಪರಿವರ್ತನೆಯಾದದ್ದು, ಅನಾದಿ ಕಾಲದ ಧಾರ್ಮಿಕ ಕಟ್ಟಳೆಯ ಉಲ್ಲಂಘನೆ ಯಾಗಿದ್ದಿತು. (ಅಂದರೆ, ವಾಸ್ತವವಾಗಿ, ಅದೇ ಹೆಂಗಸಿನ ಮೇಲೆ ಇತರ ಗಂಡಸರು ಹೊಂದಿದ್ದ ಪ್ರಾಚೀನ ಪರಂಪರಾಗತ ಹಕ್ಕಿನ ಉಲ್ಲಂಘನೆಯಾಗಿದ್ದಿತು). ಈ ಉಲ್ಲಂಘನೆಗೆ ಪ್ರಾಯಶ್ಚಿತ್ತವಾಗಬೇಕಿದ್ದಿತು. ಅಥವಾ ಆ ಹೆಂಗಸನ್ನು ಒಂದು ನಿರ್ದಿಷ್ಟ ಕಾಲದವರೆಗೆ ಸರ್ವರಿಗೂ ಒಪ್ಪಿಸಿ ಆ ಉಲ್ಲಂಘನೆಯನ್ನು ಸಹಿಸಿ ಕೊಳ್ಳಬೇಕಿದ್ದಿತು".[6] ಎಂಗೆಲ್ಸ್ ತಮ್ಮ ಕೃತಿ ರಚನೆಗೆ ಬಾಹೊಫೆನ್ನರ ಕೃತಿಯಿಂದ ಕೆಲವು ಅಭಿಜಾತ ಆಕರಗಳನ್ನು ತೆಗೆದುಕೊಳ್ಳುವುದನ್ನು ಬಿಟ್ಟರೆ, ಮಾರ್ಗನ್ನರನ್ನು ಅವಲಂಬಿಸಿದ್ದೇ ಹೆಚ್ಚು. ಪ್ರಾಚೀನ ಜಗತ್ತಿನ ಧಾರ್ಮಿಕ ವಲಯದಲ್ಲಾದ ಬದಲಾವಣೆಗಳಿಂದಾಗಿ ಮಾನವ ಸಮಾಜದ ವಿವಿಧ ಹಂತಗಳು ರೂಪಗೊಂಡವು ಎಂದು ಹೇಳಿದ ಬಾಹೋಫೆನ್ನರ ನಿಲುವು ಅಪ್ಪಟ ಭೌತವಾದೀ ಚಿಂತಕ ಎಂಗೆಲ್ಸ್‌ಗೆ ಒಪ್ಪಿಗೆಯಾಗುವುದಿಲ್ಲ. ಈ ಕಾರಣಕ್ಕಾಗಿ ಎಂಗೆಲ್ಸ್ 'ಆದಿಮ ಸಮಾಜಗಳು' ಕೃತಿಯಲ್ಲಿನ ಮಾರ್ಗನ್ನರ ನಿಲುವುಗಳನ್ನು ತಮ್ಮ ಕೃತಿ ರಚನೆಯ ಸಂದರ್ಭದಲ್ಲಿ ಮುಖ್ಯವಾಗಿಟ್ಟುಕೊಳ್ಳುತ್ತಾರೆ. ಉತ್ಪಾದಕ ಶಕ್ತಿಗಳೇ ಸಮಾಜದ ಸ್ವರೂಪವನ್ನು ನಿರ್ಣಯಿಸುವುದು ಎಂಬ ಮಾರ್ಗನ್ನರ ಭೌತವಾದಿ ನಿಲುವು ಎಂಗೆಲ್ಸ್‌ರನ್ನು ಪ್ರಭಾವಿಸಿದಂತಿದೆ. ಮಾರ್ಗನ್ನರ ಈ ಮಹತ್ವದ ನಿಲುವನ್ನು ಎಂಗೆಲ್ಸ್ ಹೀಗೆ ಉಲ್ಲೇಖಿ ಸಿದ್ದಾರೆ. "ಈ ನಿಟ್ಟಿನಲ್ಲಿ ಮಾನವನ ಕೌಶಲ್ಯದ ಮೇಲೆಯೇ, ಇಳೆಯ ಮೇಲೆ ಅವನ ಪಾರಮ್ಯದ ಪ್ರಶ್ನೆ, ನಿಸರ್ಗದ ಮೇಲೆ ಅವರ ಆಧಿಪತ್ಯದ ಪ್ರಶ್ನೆ ಅವಲಂಬಿಸಿದ್ದುದು. ಮಾನವರಷ್ಟೆ ತಮ್ಮ ಆಹಾರೋತ್ಪಾದನೆಯ ಮೇಲೆ ಸಂಪೂರ್ಣ ಹತೋಟಿ ಪಡೆದುಕೊಂಡ ಜೀವಿಗಳು ಎಂದು ಹೇಳಬಹುದು. ಜೀವನೋಪಾಯ ಸಾಧನಗಳ ಮೂಲಗಳನ್ನು ವಿಸ್ತರಿಸಿದ ಕಾಲಘಟ್ಟಗಳೇ ಹೆಚ್ಚು ಕಡಿಮೆ ಮಾನವ ಪ್ರಗತಿಯ ಮಹೋನ್ನತ್ತ ಕಾಲಘಟ್ಟಗಳೇ ಆಗಿವೆ".[1] ಮಾರ್ಗನ್ನರ ಈ ಚಿಂತನೆಗಳ ಆಳದಲ್ಲಿ ಭೌತವಾದೀ ಚಾರಿತ್ರಿಕ ಅಧ್ಯಯನ ವಿಧಾನದ ಬೇರುಗಳಿರುವುದು ಸ್ಪಷ್ಟವಾಗಿದೆ. ಮತ್ತು ಎಂಗೆಲ್ಸ್ ತಮ್ಮ ಚರ್ಚೆಗೆ ಮಾರ್ಗನ್ನರನ್ನು ಮೂಲಾಧಾರವಾಗಿ ಈ ಕಾರಣಕ್ಕಾಗಿಯೇ ಉಲ್ಲೇಖಿಸುತ್ತಾರೆ.

ಎಂಗೆಲ್ಸ್, ಮಾರ್ಗನ್‌ರ ಚಿಂತನೆಗಳನ್ನು ಅಲ್ಲಲ್ಲಿ ಮಾರ್ಪಡಿಸಿ ಮಾನವನ ಸಾಮಾಜಿಕ ಸಂಸ್ಥೆಗಳ ಇತಿಹಾಸವನ್ನು ಮತ್ತು ಖಾಸಗಿ ಆಸ್ತಿ ರೂಪುಗೊಂಡು ಆದಿಮ ಸಮತಾವಾದಿ ಸಮಾಜವು ಇಲ್ಲವಾಗಿ ಊಳಿಗಮಾನ್ಯ ವ್ಯವಸ್ಥೆ ಅಸ್ಥಿತ್ವಕ್ಕೆ ಬಂದ ಬಗೆಯನ್ನು ಕಟ್ಟಿಕೊಡುತ್ತಾರೆ. ಆಹಾರ ಸಂಗ್ರಹಣೆಯಿಂದ ಕೃಷಿ ಹಂತದ ಚಟುವಟಿಕೆಗಳವರೆಗೆ ಅದರಲ್ಲೂ ನೇಗಿಲ ಬಳಕೆಯಿಂದ ಅಧಿಕಗೊಂಡ ಕೃಷಿ ಉತ್ಪಾದನೆ ಯವರೆಗೆ ಇದ್ದ ಸ್ತ್ರೀ ಪ್ರಧಾನ ಸಮಾಜವು ಹೇಗೆ ಪುರುಷ ಪ್ರಧಾನ ಸಮಾಜವಾಗಿ ರೂಪಾಂತರಗೊಂಡಿತು ಎಂದು ವಿವರಿಸುವಲ್ಲಿ ಎಂಗೆಲ್ಸ್ ಯಶಸ್ವಿಯಾಗಿದ್ದಾರೆ. ನೇಗಿಲ ಬಳಕೆಯಿಂದ ಗಣ ವ್ಯವಸ್ಥೆಯಲ್ಲಿ ಆದ ಅಧಿಕ ಸಂಪತ್ತಿನ ಉತ್ಪಾದನೆಯು ಉತ್ಪಾದನಾ ಸಂಬಂಧಗಳನ್ನು ನಿರ್ಣಾಯಕವಾಗಿ ಬದಲಿಸಿದ್ದನ್ನು ಎಂಗೆಲ್ಸ್ ಕುಟುಂಬ ವ್ಯವಸ್ಥೆ ಜಾರಿಗೆ ಬಂದ ಹಿನ್ನೆಲೆಯಲ್ಲಿ ವಿವರಿಸುತ್ತಾರೆ. "ಒಮ್ಮೆ ಇಂತಹ ಸಂಪತ್ತುಗಳು ಕುಟುಂಬಗಳ ಖಾಸಗಿ ಆಸ್ತಿಗಳಾಗಿ ಆಮದು ಮತ್ತು ಅಲ್ಲಿ ಅವು ಶೀಘ್ರವಾಗಿ ಬೆಳೆದುದು, ಯುಗ್ಮ ವಿವಾಹ ಹಾಗೂ ಮಾತೃ ಅಧಿಕಾರ ಗೋತ್ರದ ಮೇಲೆ ಆಧರಿತವಾಗಿದ್ದ ಸಮಾಜದ ಮೇಲೆ ಪ್ರಬಲ ಪ್ರಹಾರ

ನೀಡಿತು. ಯುಗ್ಮ ವಿವಾಹವು ಕುಟುಂಬ ಪದ್ಧತಿಯಲ್ಲಿ ಒಂದು ಹೊಸ ಅಂಶವನ್ನು ಸೇರಿಸಿದ್ದಿತು. ಸಹಜ ತಾಯಿಯ ಪಕ್ಕದಲ್ಲಿ ಅದು ಪ್ರಮಾಣಭೂತವಾದ ಸಹಜ ತಂದೆಯೊಬ್ಬನನ್ನು ಇರಿಸಿದ್ದಿತು. ಅವನು ಬಹುಶಃ ಇಂದಿನ ಅನೇಕ 'ತಂದೆ'ಯರಿಗಿಂತ ಹೆಚ್ಚು ನಿಖರವಾಗಿ ಪ್ರಮಾಣಿಭೂತ ನಾಗಿದ್ದನು. ಆಗ ಕುಟುಂಬದಲ್ಲಿದ್ದ ಶ್ರಮ ವಿಭಜನೆಯ ಪ್ರಕಾರ, ಆಹಾರವನ್ನು ಒದಗಿಸುವುದೂ, ಅದಕ್ಕೆ ಅವಶ್ಯವಾದ ಸಾಧನಗಳನ್ನು ಒದಗಿಸುವುದೂ, ಆದ್ದರಿಂದಾಗಿ ಈ ಸಾಧನಗಳ ಮಾಲಿಕತ್ವವೂ ಗಂಡಸಿನ ಪಾಲಿಗೆ ಬಂದಿತು".[2] ಅಂದರೆ ಉತ್ಪಾದನಾ ಸಂಬಂಧಗಳನ್ನು ನಿಯಂತ್ರಿಸುವ ದುಡಿಮೆಯ ಸಾಧನಗಳು ಪುರುಷನ ವಶಕ್ಕೆ ವರ್ಗಾಂತರಿಸಲ್ಪಟ್ಟವು. ಮಿಗುತಾಯವು ಖಾಸಗೀ ಆಸ್ತಿಯಾಗಿ ಮಾಲಿಕ ಮತ್ತು ಗುಲಾಮ ವ್ಯವಸ್ಥೆಯ ಜೊತೆಗೆ ಆಸ್ತಿಯ ವ್ಯಕ್ತಿಗತ ಮುಂದುವರಿಕೆಗಾಗಿ ಕುಟುಂಬಗಳು ಅಸ್ತಿತ್ವಕ್ಕೆ ಬಂದವು. ಈ ಕುಟುಂಬದಲ್ಲಿ ಸಂಪತ್ತಿನ ಒಡೆಯನಾದ ಪುರುಷ ತನ್ನ ಒಡೆತನದ ಆಸ್ತಿಯು ತನ್ನ ಸಂತಾನಕ್ಕೆ ಮಾತ್ರ ಮೀಸಲಾಗಬೇಕೆಂಬ ಉದ್ದೇಶದಿಂದಲೇ ಸ್ತ್ರೀಯನ್ನು ಏಕಪತಿತ್ವ ಎಂಬ ಸಾಮಾಜಿಕ ನಿಯಮಕ್ಕೆ ಒಳಪಡಿಸಿದನು. ಇದನ್ನು ಡಿ.ಡಿಕೋಸಂಬಿ ಹೀಗೆ ವಿವರಿಸುತ್ತಾರೆ. "ಗಣ ವ್ಯವಸ್ಥೆಯಲ್ಲಿ ಶಿಲೆಯ ಸಾಧನ ಸಲಕರಣೆಗಳನ್ನು ಬಿಟ್ಟರೆ ಮತ್ತಾವ ಉತ್ಪಾದನಾ ಸಾಧನಗಳೂ ಇಲ್ಲ. ಆಹಾರ ಎಂದರೆ ಸಂಪೂರ್ಣವಾಗಿ ಪ್ರಕೃತಿ ಸಂಪತ್ತನ್ನು ಅವಲಂಬಿಸಿದ್ದು. ಅದನ್ನು ಹುಡುಕುತ್ತಾ ಸಂಚರಿಸುವುದೇ ಇವರ ಬದುಕು. ಸ್ಥಿರ ನಿವಾಸ ಸ್ಥಾನಗಳಾಗಲಿ, ಮನೆ ಎಂಬುದಾಗಲಿ ಇಲ್ಲ. ಈ ವ್ಯವಸ್ಥೆಯಲ್ಲಿ ಮಾತೃತ್ವಕ್ಕಲ್ಲದೆ ಪಿತೃತ್ವ ಎಂಬುದಕ್ಕೆ ಯಾವ ಮಹತ್ವವೂ ಇಲ್ಲ. ಇದನ್ನು ಮಾತೃಸ್ವಾಮ್ಯ ಎಂದು ಕರೆಯುವುದಕ್ಕಿಂತ, ಮಾತೃ ಪ್ರಧಾನ ಅಥವಾ ಮಾತೃ ಪರಂಪರೆ ಎಂದು ಕರೆದರೆ ಹೆಚ್ಚು ಸೂಕ್ತವಾಗುತ್ತದೆ. ವ್ಯಕ್ತಿಯನ್ನು ತಾಯಿಯ ಮುಖೇನ ಗುರುತಿಸಲಾಗುತ್ತದೆಯೇ ಹೊರತು ತಂದೆಯ ಮುಖೇನ ಅಲ್ಲ. ಮಕ್ಕಳನ್ನು ಹೆರುವ ತಾಯಿಯಂತೆಯೇ ಪ್ರಕೃತಿಯೂ ಫಲವಂತಳಾಗಿದ್ದಾಳೆಂದೇ ಪ್ರಕೃತಿಯನ್ನು ದೇವತೆ ಎಂದು ಗುರುತಿಸಲಾಗುತ್ತದೆ. ಶಿಲಾಯುಗದ ಎಲ್ಲ ದೇವತೆಗಳೂ ಸ್ತ್ರೀಯರೇ. ಪಶುಪಾಲನೆ ಆರಂಭ ಗೊಂಡು, ಪುರುಷರ ಕೈಗೆ ಪಶುಸಂಪತ್ತು ಸೇರಿ ಹೋಗಿ ಪಿತೃಸ್ವಾಮ್ಯ ಸಮಾಜ ಹುಟ್ಟಿಕೊಂಡ ನಂತರ ದಲ್ಲಷ್ಟೇ ಪುರುಷ ದೇವತೆಗಳು ಬಂದದ್ದು. ಅಲ್ಲದೆ, ಆವರೆಗಿನ ಹಳೆಯ ದೇವತೆಗಳನ್ನು ಈ ಹೊಸ ದೇವತೆಗಳ ಹೆಂಡಿರನ್ನಾಗಿ ಕೂಡ ಮಾಡಿಬಿಡಲಾಯಿತು"[3]

ಕೋಸಂಬಿಯವರೂ ಸಹ ಉತ್ಪಾದನಾ ಸಾಧನಗಳು ಯಾವಾಗ ಪುರುಷನ ಕೈಗೆ ಹಸ್ತಾಂತರ ವಾದವೋ ಆಗಲೇ ಮಹಿಳೆ ತಾನು ಹೊಂದಿದ್ದ ಪ್ರಾಧಾನ್ಯತೆಯನ್ನು ಕಳೆದು ಕೊಳ್ಳಬೇಕಾಯಿತು ಎನ್ನುತ್ತಾರೆ. ಎಂಗೆಲ್ಸ್‌ರ ಪ್ರಕಾರ ಕುಟುಂಬದ ಸಂಪತ್ತು ಹೆಚ್ಚಿದಂತೆ ಅದು ಒಂದು ಕಡೆ ಕುಟುಂಬದಲ್ಲಿ ಹೆಂಡತಿಗಿಂತ ಗಂಡನಿಗೆ ಹೆಚ್ಚು ಮುಖ್ಯವಾದ ಸ್ಥಾನಮಾನವನ್ನು ಒದಗಿಸಿಕೊಟ್ಟಿತು. ಮತ್ತೊಂದು ಕಡೆ ತನ್ನ ಆಸ್ತಿಗೆ ಉತ್ತರಾಧಿಕಾರದ ಪಾರಂಪರಿಕ ಪದ್ಧತಿಯನ್ನು ಕಿತ್ತೊಗೆದು ಅದನ್ನು ತನ್ನ ಸ್ವಂತ ಮಕ್ಕಳ ಪರವಾಗುವಂತೆ ಒದಗಿಸಲು ತನ್ನ ಈ ದೃಢಗೊಂಡ ಸ್ಥಾನಮಾನವನ್ನು ಬಳಸಿಕೊಳ್ಳಲು ಅವನಿಗೆ ಉತ್ತೇಜನ ನೀಡಿತು. ಆದರೆ ವಂಶಾವಳಿಯನ್ನು ಎಲ್ಲಿಯವರೆಗೆ ಮಾತೃ ಅಧಿಕಾರದ ಪ್ರಕಾರ ಗುರುತಿಸ ಲಾಗುತ್ತಿದ್ದಿತೋ ಅಲ್ಲಿಯವರೆಗೆ ಇದು ಅಸಾಧ್ಯವಾಗಿದ್ದಿತು. ಆದ್ದರಿಂದ ಆ ಮಾತೃ ಅಧಿಕಾರ ಪದ್ಧತಿಯನ್ನು ಕಿತ್ತೊಗೆಯ ಬೇಕಿದ್ದಿತು ಕೋಸಂಬಿಯವರು ಉತ್ಪಾದನಾ ಸಂಬಂಧಗಳಲ್ಲಿ ಆದ ಗುರುತರ ಬದಲಾವಣೆಗಳು ಹೇಗೆ ಮನುಷ್ಯನ ಆಧ್ಯಾತ್ಮಿಕ ಜಗತ್ತನ್ನು ರೂಪಾಂತರಿಸಿತು ಎಂಬುದನ್ನು ವಿವರಿಸಿದರೆ, ಎಂಗೆಲ್ಸ್ ಬದಲಾದ ಆರ್ಥಿಕ

ಚಟುವಟಿಕೆಗಳು ಸಮುದಾಯದ ಅಧಿಕಾರದ ಗುರತ್ವವನ್ನೇ ಬದಲಿಸಿದ್ದನ್ನು ವಿಶ್ಲೇಷಿಸುತ್ತಾರೆ. ಈ ಬಗೆಯ ವಿಶ್ಲೇಷಣೆಯನ್ನು ದೇವಿಪ್ರಸಾದ್ ಈ ಕೆಳಗಿನಂತೆ ಕಾಲಾನುಕ್ರಮಿಸಲು ಪ್ರಯತ್ನಿಸಿದ್ದಾರೆ. "ಮನುಷ್ಯ ಬೇಟೆಯಾಡುವುದನ್ನು ಕಲಿಯುವವರೆಗೆ, ಗುಂಪಿನಲ್ಲಿ ಸ್ತ್ರೀಯರು, ತಾಯಂದಿರು. ಮುಖ್ಯರಾಗಿದ್ದರು. ಈಟಿ, ಭರ್ಚಿಗಳ ಆವಿಷ್ಕಾರದ ನಂತರ, ಅಂದರೆ ಈಟಿಯಿಂದ ಶಿಕಾರಿ ಮಾಡುವುದನ್ನು ಕಲಿತ ಮೇಲೆ ಪುರುಷರು ಗುಂಪಿನ ಮುಖ್ಯರದರು. ಕೃಷಿಕಾರ್ಯದ ನಂತರ ಕಾಲದಲ್ಲಿ ನೇಗಿಲು ಎತ್ತುಗಳನ್ನು ಬಳಸಿ ದೊಡ್ಡ ದೊಡ್ಡ ಹೊಲಗಳ ವ್ಯವಸಾಯ ಮಾಡುವ ಸಮಯದಲ್ಲಿ ಪುರುಷರು ಮತ್ತೆ ಮುಖ್ಯರಾದರು".[4] ದೇವಿಪ್ರಸಾದರು ಉತ್ಪಾದನಾ ಸಾಧನಗಳು ಸಾಮಾಜಿಕ ಗಣ್ಯತೆಯನ್ನು ನಿರ್ಧರಿಸುತ್ತವೆ ಎಂಬುದರ ಕಡೆಗೆ ಹೆಚ್ಚು ಒತ್ತು ನೀಡುತ್ತಾರೆ. "ಕೃಷಿ ಕಾರ್ಯ ಎಲ್ಲಿಯವರೆಗೆ ಪುರುಷರ ಕೈಗೆ ಬಂದಿರಲಿಲ್ಲವೋ ಸ್ತ್ರೀಯರ ಕೈಯಲ್ಲೇ ಇದ್ದಿತೋ, ಅಲ್ಲಿಯ ವರೆಗೆ ಸಮಾಜದ ವ್ಯವಸ್ಥೆ ಹೇಗಿದ್ದಿತು? ಅಲ್ಲಿ ಸ್ತ್ರೀಯರೇ ಪ್ರಧಾನರು, ಮುಖ್ಯರು. ಹೀಗಾಗಿ ಆ ಕಾಲದ ಸಮಾಜಕ್ಕೆ 'ಮಾತೃಪ್ರಧಾನ ಸಮಾಜ' ಎಂದು ಹೆಸರು. ಇದನ್ನು ನಾರೀ ಪ್ರಧಾನ ಸಮಾಜ ಎಂದು ಕರೆಯಬಹುದು".[5] ಎನ್ನುತ್ತಾರೆ. ದೇವಿಪ್ರಸಾದ್ ಚಟ್ಟೋಪಾಧ್ಯಾಯ. ಕೃಷಿ ಉತ್ಪಾದನೆಯ ಮುಖ್ಯ ಹಂತದಲ್ಲಿ ಲಘು ಕೃಷಿಯು ಸ್ತ್ರೀಯ ಕೈಯಿಂದ ಪುರುಷನ ಕೈಗೆ ವರ್ಗವಾಗಿ, ಕಬ್ಬಿಣದ ಮತ್ತು ನೇಗಿಲ ಬಳಕೆಯಿಂದ ಅಧಿಕ ಉತ್ಪಾದನೆಯಾಗಿ ಮಿಗುತಾಯವು ವ್ಯಕ್ತಿಯೊಬ್ಬನ ಕೈಗೆ ಸೇರಿದ ಮೇಲೆ ಆದಿಮ ಗಣ ಸಮಾಜವು ವರ್ಗ ಸಮಾಜವಾಗಿ ರೂಪುಗೊಂಡಿತು. ಅಲ್ಲಿ ಸಹಜವಾಗಿಯೇ ಲಿಂಗಭೇದಗಳು ಉದ್ಭವಿಸಿ ಮಹಿಳೆಯು ಅಧೀನ ಸ್ಥಿತಿಗೆ ತಳ್ಳಲ್ಪಟ್ಟಳು. ಇದನ್ನು ಎಂಗೆಲ್ಸ್ ಹೀಗೆ ವಿವರಿಸುತ್ತಾರೆ 'ಮಾತೃ ಅಧಿಕಾರದ ಪತನವು ಸ್ತ್ರೀ ಕುಲದ ವಿಶ್ವೈತಿಹಾಸಿಕ ಪರಾಭವವಾಗಿದ್ದಿತು. ಪುರುಷನು ಮನೆಯಲ್ಲೂ ಆಡಳಿತ ಸೂತ್ರಗಳನ್ನು ತನ್ನ ಕೈಗೇ ತೆಗೆದುಕೊಂಡನು. ಮಹಿಳೆಯನ್ನು ಕೆಳದರ್ಜೆಗೆ ಇಳಿಸಲಾಯಿತು. ದಾಸಳನ್ನಾಗಿ ಮಾಡಲಾಯಿತು. ಮಾನವನ ವಿಷಯಾಭಿಲಾಷೆಗೆ ಗುಲಾಮಳನ್ನಾಗಿ ಮಾಡಲಾಯಿತು. ಮಕ್ಕಳನ್ನು ಹೆರುವ ಸಾಧನವನ್ನಾಗಿ ಮಾಡಲಾಯಿತು".[6] ಅಂದರೆ ಕೃಷಿ ಪ್ರಧಾನ ಉತ್ಪಾದನಾ ವ್ಯವಸ್ಥೆಯೇ ಅಂತಿಮವಾಗಿ ವರ್ಗಭೇದ ಮತ್ತು ಲಿಂಗಭೇದಗಳನ್ನು ಸಮಾಜದಲ್ಲಿ ಹುಟ್ಟು ಹಾಕಿತು ಮತ್ತು ಮಹಿಳೆಯು ಅಂತಿಮವಾಗಿ ತನ್ನ ಸಾಮಾಜಿಕಾರ್ಥಿಕ ಅಧಿಕಾರಗಳನ್ನು ಕಳೆದುಕೊಂಡಳು ಎಂಬುದು ಮೇಲಿನ ಚರ್ಚೆಯಿಂದ ವ್ಯಕ್ತವಾಗುತ್ತದೆ. ಮಾರ್ಗನ್, ಎಂಗೆಲ್ಸ್, ಕೋಸಂಬಿ, ಅಮೃತ ಡಾಂಗೆ ಮತ್ತು ದೇವಿಪ್ರಸಾದರ ಮಾತೃಪ್ರಧಾನ ಸಮಾಜದ ಕುರಿತ ನಿಲುವುಗಳು ಬಹು ಚರ್ಚಿತ ನಿಲುವುಗಳಾಗಿವೆ. ಮತ್ತು ಈ ಚಿಂತನೆಗಳನ್ನು ಆಧರಿಸಿ ಮಾತೃ ಪ್ರಧಾನತೆಯ ಕುರಿತು ಅನೇಕ ಚರ್ಚೆಗಳು ಏರ್ಪಟ್ಟಿವೆ. ಕನ್ನಡದ ಮಾರ್ಕ್ಸ್‌ವಾದಿ ಮಹಿಳಾ ಚಿಂತಕರು ಈ ಚರ್ಚೆಯನ್ನು ಮೇಲಿನ ವಿದ್ವಾಂಸರ ಚರ್ಚೆಯ ನೆಲೆಯಲ್ಲಿಯೇ ವಿಸ್ತರಿಸಲು ಪ್ರಯತ್ನಿಸಿದ್ದಾರೆ. ಜೊತೆಗೆ ಉಪಸಂಸ್ಕೃತಿಗಳ ಕುರಿತ ಜನಪದ ವರ್ಗಗಳ, ಕೆಳಜಾತಿಗಳ ಮತ್ತು ಬುಡಕಟ್ಟು ಸಮಾಜಗಳನ್ನು ಅಧ್ಯಯನಿಸುವ ಸಂದರ್ಭದಲ್ಲಿ ಮಾತೃ ಪ್ರಧಾನತೆಯ ಕುರಿತು ಚರ್ಚೆ ಇರದಿದ್ದಲ್ಲಿ ಅದು ಅಧ್ಯಯನವೇ ಅಲ್ಲ ಎನ್ನುವಷ್ಟರ ಮಟ್ಟಿಗೆ ಮಾತೃಪ್ರಧಾನತೆಯ ಕುರಿತು ಚರ್ಚೆ ನಡೆದಿದೆ. ಮುಖ್ಯವಾಗಿ ಈ ಮಹತ್ವದ ಚಿಂತಕರ ಚರ್ಚೆಗಳನ್ನು ಹೀಗೆ ಸಂಗ್ರಹಿಸಬಹುದು.

1. ಆಹಾರ ಸಂಗ್ರಹಣೆ ಹಂತದಿಂದ ಲಘು ಕೃಷಿಯ ಹಂತದವರೆಗೆ ಮಾನವ ಸಮಾಜ ಗಣ ಸಮಾಜವಾಗಿತ್ತು. ವರ್ಗಭೇದ ಮತ್ತು ಲಿಂಗಭೇದಗಳಿರಲಿಲ್ಲ. ಅದು ಮಾತೃಪ್ರಧಾನ ಸಮಾಜ ವಾಗಿತ್ತು.
2. ಈ ಬಗೆಯ ತಾರತಮ್ಯಗಳಿಲ್ಲದ ಸಮಾಜವು ಆದಿಮ ಗಣ ಸಮಾಜವಾಗಿತ್ತು. ಕಾರಣ ಉತ್ಪಾದನಾ ವಿಧಾನವು ಸೀಮಿತವಾಗಿತ್ತು. ಉತ್ಪಾದನೆಯೂ ಗಣನೀಯವಾಗಿ ಕಡಿಮೆ ಪ್ರಮಾಣದಲ್ಲಿತ್ತು. ಮಿಗುತಾಯವಿರದ ಕಾರಣ ಮಾಲಿಕ ಮತ್ತು ಶ್ರಮಿಕ ಎಂಬ ವರ್ಗಗಳಿರಲಿಲ್ಲ.
3. ಈ ಆದಿಮ ಗಣ ಸಮಾಜದಲ್ಲಿ ಸ್ತ್ರೀ ಮುಖ್ಯಳಾಗಿದ್ದಳು ಮತ್ತು ಅವಳೇ ಗಣದ ಕೇಂದ್ರ ವಾಗಿದ್ದಳು. ಗಣದ ಪ್ರತಿ ಸದಸ್ಯನ ಏಕೈಕ ಜೈವಿಕ ಚಹರೆಯೆಂದರೆ ಅದು ತನ್ನ ತಾಯಿ ಮಾತ್ರ. ಈ ಕಾರಣಕ್ಕಾಗಿ ಆದಿಮ ಗಣ ಸಮಾಜವು ಮಾತೃಪ್ರಧಾನ ಸಮಾಜವಾಗಿತ್ತು.
4. ಕೃಷಿ ಹಂತದ ಸಂದರ್ಭದಲ್ಲಿ, ಉತ್ಪಾದನಾ ವಿಧಾನದಲ್ಲಿ ಆದ ಬದಲಾವಣೆಗಳು ಗಣದ ಸಾಮಾಜಿಕ ಸಂಬಂಧಗಳನ್ನು ನಿರ್ಣಾಯಕವಾಗಿ ರೂಪಾಂತರಿಸಿದವು. ಕಬ್ಬಿಣ ಮತ್ತು ನೇಗಿಲ ಬಳಕೆಯಿಂದ ಉತ್ಪಾದನಾ ವ್ಯವಸ್ಥೆಯು ಪುರುಷನ ಕೈವಶವಾಯಿತು. ಗಣದ ಸಂಪತ್ತು ಬಲಶಾಲಿ ಯೊಬ್ಬನ ಕೈವಶವಾಗಿ ಗಣದಲ್ಲಿನ ದುಡಿವ ಸದಸ್ಯರು ಈ ಬಲಶಾಲಿಯ ಆಳುಗಳಾದರು. ಮಹಿಳೆಯು ಈ ಯಜಮಾನನ ಆಸ್ತಿಯನ್ನು ಕಾಪಾಡಲೆಂದು ಹುಟ್ಟುವ ಮಗುವಿಗೆ ತಾಯಿ ಯಾಗುವುದಕ್ಕೆ ಮಾತ್ರ ಸೀಮಿತವಾದಳು. ಮತ್ತು ಮಹಿಳೆಯು ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಅಧೀನ ಸ್ಥಿತಿಗೆ ತಳ್ಳಲ್ಪಟ್ಟಳು.
5. ಮಾತೃಪ್ರಧಾನತೆಯು ಇಂದಿಗೂ ಪಾರಂಪರಿಕ ಕೃಷಿಕ ಮತ್ತು ಬುಡಕಟ್ಟು ಸಮಾಜಗಳಲ್ಲಿದೆ. ಅದು ಸಂಕೇತದ ಮಟ್ಟದಲ್ಲಿದ್ದು, ಈ ಸಮುದಾಯಗಳ ಆಚರಣೆಗಳಲ್ಲಿ ವ್ಯಕ್ತವಾಗುತ್ತದೆ.

ಮೇಲಿನ ಈ ಅಂಶಗಳನ್ನು ಈ ಭಾಗದ ಬರಹದಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಮಾರ್ಕ್ಸ್‌ವಾದಿಗಳ ಭೌತವಾದೀ ಚರಿತ್ರೆ ರಚನಾ ಕ್ರಮವು ಈಗಿರುವ ಚರಿತ್ರೆ ರಚನಾಕ್ರಮಗಳಲ್ಲಿಯೇ ಶ್ರೇಷವಿವಾದದ್ದು. ಏಕೆಂದರೆ ಇತಿಹಾಸ ಪೂರ್ವ ಮಾನವ ಸಮಾಜದ ಹಂತಗಳನ್ನು ವಿವರಿಸಲು ಬೇಕಾದ ಆಕರಗಳು ಲಭ್ಯವಿಲ್ಲ. ಸಾಂಪ್ರದಾಯಿಕ ಚರಿತ್ರೆ ರಚನಾ ವಿಧಾನಕ್ಕೆ ಪುರಾತತ್ವ ಆಕರಗಳು ಪೂರಕ ವಾಗಿದ್ದರೂ ಸಹ, ಶಾಸ್ತ್ರೀಯ ಆಕರಗಳು ಮಾನವನ ಇತಿಹಾಸ ಪೂರ್ವ ಸಾಮಾಜಿಕ ಚರಿತ್ರೆಯನ್ನು ಕಟ್ಟಿಕೊಡಲು ಅಷ್ಟು ಶಕ್ತವಾಗಿಲ್ಲ. ಈ ಕಾರಣದಿಂದಾಗಿ ಗತಿತಾರ್ಕಿಕ ವಿಧಾನದ ಮೂಲಕ ಮಾನವನ ಆದಿಮ ಸಾಮಾಜಿಕ ಚರಿತ್ರೆಯನ್ನು ಕಟ್ಟಿಕೊಡಲು ಮೇಲೆ ಉಲ್ಲೇಖಿಸಲಾಗಿರುವ ವಿದ್ವಾಂಸರು ಪ್ರಯತ್ನಿ ಸಿದ್ದಾರೆ.

ಮೊದಲಿಗೆ ಸ್ತ್ರೀ ಪ್ರಧಾನ, ನಾರಿ ಪ್ರಧಾನ ಮತ್ತು ಮಾತೃ ಪ್ರಧಾನತೆಯು ಆದಿಮ ಗಣ ಸಮಾಜದಲ್ಲಿ ಇತ್ತೇ ಎಂಬುದನ್ನು ಪರಿಶೀಲಿಸಬಹುದಾಗಿದೆ. ಎಂಗೆಲ್ಸ್ ಮುಂತಾದ ಎಡವಾದಿ ಅಧ್ಯಯನ ಕಾರರು ಆಹಾರ ಸಂಗ್ರಹಣೆಯಿಂದ ಕೃಷಿ ಹಂತದವರೆಗೆ ಗಣ ಸಮಾಜದಲ್ಲಿ ಆಹಾರ ಉತ್ಪಾದನೆಯು ಸೀಮಿತವಾಗಿತ್ತು. ಕಾರಣ ಉತ್ಪಾದನಾ ಸಾಧನಗಳು ಸುಧಾರಿಸಿರಲಿಲ್ಲ. ಮತ್ತು ಈ ಒರಟು ಉತ್ಪಾದನಾ ಸಾಧನಗಳಿಂದ ಹೆಚ್ಚು ಉತ್ಪಾದಿಸುವಂತಿರಲಿಲ್ಲ. ಈ ಕಾರಣಕ್ಕಾಗಿ ಉತ್ಪಾದಿತ ಫಲಿತವು ಗಣ ಸಮಾಜದ ಎಲ್ಲ ಸದಸ್ಯರಿಗೆ ಸಮನಾಗಿ ಹಂಚಲ್ಪಡುತ್ತಿತ್ತು. ಹೀಗಾಗಿ ಒಟ್ಟಾರೆಯ ಉತ್ಪಾದಿತ ಫಲಿತವು ಸಮನಾಗಿ ವಿತರಣೆಯಾಗುತ್ತಿದ್ದರಿಂದ ಗಣದ

ಸಾಮಾಜಿಕ ಸಂಬಂಧಗಳಲ್ಲಿ ವರ್ಗಭೇದಗಳು ಮತ್ತು ಲಿಂಗಭೇದ ಗಳಿರಲಿಲ್ಲ. ಸ್ತ್ರೀಯು ಮಗುವಿಗೆ ಜನ್ಮಕೊಡುವ ಕಾರಣಕ್ಕೆ ಗಣದ ಸದಸ್ಯರು ತಾಯಿಯನ್ನು ಪ್ರಧಾನ ಜೈವಿಕ ಸಂಬಂಧವಾಗಿ ಪರಿಗಣಿಸುತ್ತಿದ್ದರು. ಅದಕ್ಕಾಗಿ ಇದು ಮಾತೃಪ್ರಧಾನ ಸಮಾಜವಾಗಿತ್ತು ಎನ್ನುತ್ತಾರೆ. 'ಪ್ರಧಾನತೆ' ಎಂಬುದು ಅಧೀನ ಸ್ಥಿತಿಯಿಂದ ನ್ಯಾಯಬದ್ಧಗೊಳ್ಳಲ್ಪಡುತ್ತದೆ. ಪ್ರಧಾನತೆಯ ಕಾರಣಕ್ಕಾಗಿಯೇ ಅಧೀನಗೊಂಡ ಸ್ಥಿತಿ ಹೊಂದಿರ ಬೇಕಾಗುತ್ತದೆ. ಗಣ ಹಂತದ ವರ್ಗರಹಿತ ಸಮಾಜದಲ್ಲಿ ಪ್ರಧಾನ ಮತ್ತು ಅಧೀನ ಸ್ಥಿತಿಗಳಿಲ್ಲದ ಸಂದರ್ಭದಲ್ಲಿ ಸ್ತ್ರೀಗೆ 'ಪ್ರಾಧಾನ್ಯತೆ' ಇರಲು ಅಥವಾ 'ಮಾತೃ ಅಧಿಕಾರವಿರಲು' ಸಾಧ್ಯವಿತ್ತೇ? ಎಂಬ ಪ್ರಶ್ನೆ ಮುಂಚೂಣಿಗೆ ಬರುತ್ತದೆ. ಮಾತೃವಿಗೆ ಅಧಿಕಾರ ಇತ್ತು ಎನ್ನುವುದಾದರೆ ಅದು ಯಾವ ಬಗೆಯ ಅಧಿಕಾರವಾಗಿತ್ತು. ಆ ಅಧಿಕಾರದ ಸ್ವರೂಪವೇನು? ಈ ಎಲ್ಲ ಪ್ರಶ್ನೆಗಳು ಮುಖ್ಯವಾದಾಗ ಚರ್ಚೆ ಇಡಿಯಾಗಿ ಬೇರೆಯೇ ಆಗುತ್ತದೆ. ಗಣ ಸಮಾಜದಲ್ಲಿ ಗಣದ ಪ್ರತಿ ಸದಸ್ಯರು ವರ್ಗ ಮತ್ತು ಲಿಂಗಭೇದಗಳಿಲ್ಲದೆ ಸಮಾನರು. ಆದರೆ ಡಿ.ಡಿ. ಕೋಸಂಬಿಯವರ ಪ್ರಕಾರ ಉತ್ಪಾದಿಸುವ 'ಭೂಮಿ' ಮತ್ತು ಮನುಷ್ಯನಿಗೆ ಜೀವಕೊಡುವ 'ಹೆಣ್ಣು'ಗಳಿಗೆ ಗಣದಲ್ಲಿ ವಿಶೇಷ ಪರಿಗಣನೆಗಳಿದ್ದವು. ಈ ಎರಡು ಸಂಗತಿಗಳನ್ನು ಗಣಹಂತದ ಮನುಷ್ಯ ಆಧ್ಯಾತ್ಮಿಕ ನೆಲೆಯಲ್ಲಿ ಆರಾಧಿಸುತ್ತಿದ್ದ ಎಂಬುದನ್ನು ಚಟ್ಟೋಪಾಧ್ಯಾಯ, ಕೋಸಂಬಿ, ಅಮೃತ ಢಾಂಗೆ ಮತ್ತು ಕನ್ನಡದ ಬಹುಪಾಲು ಸ್ತ್ರೀವಾದಿ ಚಿಂತಕರು ಅನುಮೋದಿಸುತ್ತಾರೆ. ಆದರೆ ಈ ವಿಶೇಷ ಪರಿಗಣನೆ ಮತ್ತು ಆರಾಧನೆಗಳು ಮಹಿಳೆಗೆ ಸಾಮಾಜಿಕ ಅಧಿಕಾರಗಳನ್ನು ಕೊಟ್ಟಿರುವ ಸಾಧ್ಯತೆಗಳಿವೆಯೇ? ಇರಲು ಸಾಧ್ಯವಿಲ್ಲ. ಏಕೆಂದರೆ ಗಣಹಂತದಲ್ಲಿ ಅಧಿಕಾರಸ್ಥ ಶಕ್ತಿ ಕೇಂದ್ರವೇ ಇರಲಿಲ್ಲ. ಗಣ ಹಂತದ ಸಮಾಜದಲ್ಲಿ ಗಣದ ಎಲ್ಲ ಸದಸ್ಯರು ಸಮಾನರೇ ಹೊರತು ಅಲ್ಲಿ ಪ್ರಧಾನ ಸ್ಥಿತಿ ಮತ್ತು ಅಧೀನ ಸ್ಥಿತಿಗಳಿರುವುದಿಲ್ಲ. ಮತ್ತು ಮಾತೆಯರನ್ನು ಆರಾಧಿಸುವ ವ್ಯವಸ್ಥೆಯಲ್ಲಿ, ಮಾತೆಯರಿಗೆ ಸಾಮಾಜಿಕ ಮತ್ತು ರಾಜಕೀಯಾರ್ಥಿಕ ಅಧಿಕಾರಗಳಿರುತ್ತವೆ ಎಂದು ಭಾವಿಸುವುದು ತಪ್ಪಾಗುತ್ತದೆ. ಹೆಣ್ಣನ್ನು ಆರಾಧಿಸುವ ಸಮಾಜಗಳು ಹೆಣ್ಣಿಗೆ ಅಧಿಕಾರ ಸ್ಥಾನಮಾನಗಳನ್ನು ನೀಡಿವೆ ಎಂಬ ಪುರಾವೆಗಳು ಚರಿತ್ರೆಯಲ್ಲಿ ಲಭ್ಯವಾಗುವ ಸಾಧ್ಯತೆಗಳಿಲ್ಲ. ಛಾಯಾದಾತರ್ ಅದನ್ನು ಹೀಗೆ ವಿವರಿಸುತ್ತಾರೆ. "ಮತಾನುಸಾರ ಅತ್ಯಂತ ಪ್ರಾಚೀನ ಕಾಲದಲ್ಲಿ ಈ ವ್ಯವಸ್ಥೆಯು ಬಹಳಷ್ಟು ಸಮಾನತೆಯ ಧೋರಣೆಯಾಗಿತ್ತು. ಅದರಲ್ಲಿ ಅಧಿಕಾರ ಕೇಂದ್ರವು ಇನ್ನೂ ಬಂದಿರಲಿಲ್ಲ. ಅಧಿಕಾರ ಲಾಲಸೆಯೂ ಇರಲಿಲ್ಲ. ಸ್ತ್ರೀಯರ ಅಧಿಕಾರವೂ ಪುರುಷರ ಮೇಲೆ ಇರಲಿಲ್ಲ. ವಂಶಾವಳಿಯು ಮಾತ್ರ ತಾಯಿಯಿಂದ ಆರಂಭವಾಗುತ್ತಿತ್ತು. ಪಂಗಡದ ಸಭಾ ಸದಸ್ಯತ್ವವೂ ತಾಯಿಯಿಂದ ನಿರ್ಣಯಿಸಲ್ಪಡುತ್ತಿತ್ತು. ಇನ್ನೊಂದು ಸಂಗತಿ ಎಂದರೆ ಸ್ತ್ರೀಯರು ಸ್ಥಿರವಾಗಿ ತಮ್ಮ ಮನೆಯಲ್ಲಿಯೇ ಒಂದೆಡೆ ಇದ್ದರು. ಪುರುಷರು ಬೇಟೆಯ ನೆಪದಲ್ಲಿ ಹೊರಗೆ ಹೆಚ್ಚು ಸಮಯ ಇರುತ್ತಿದ್ದರಾದ್ದರಿಂದ ಪಂಗಡದ ವ್ಯಾಪಕತೆಯಲ್ಲಿ ಸ್ತ್ರೀಯರ ಪಾಲು ಹೆಚ್ಚಾಗಿತ್ತು. ಹೀಗಿದ್ದರಿಂದಲೇ ಸ್ತ್ರೀಯರಿಗೆ ಮಾನ್ಯತೆ ಇತ್ತು".[7] ದಾತರ್ ಅವರ ಪ್ರಕಾರ ವರ್ಗ ನಿಷವಿವಲ್ಲದ ಆದಿಮ ಸಮಾಜಗಳಲ್ಲಿ ತರತಮ ವ್ಯವಸ್ಥೆ ಇರಲಿಲ್ಲ. ಅದು ಸಮಾನತಾ ಸಮಾಜ ವಾಗಿತ್ತು ಎನ್ನುತ್ತಾರೆ.

ಇನ್ನು 'ಮಾತೃಪ್ರಧಾನತೆ' ಚಿಂತನೆಯ ಒಳಗೇ ಇರುವ ವೈರುಧ್ಯಗಳನ್ನು ನಾವು ಗಮನಿಸಬಹುದು. ಗಣ ಹಂತದ ಸಮಾಜದಲ್ಲೂ ಸಹ ಸ್ತ್ರೀಗೆ ಇದ್ದ 'ಮಾನ್ಯತೆ'ಯ ನೆಲೆ ಆರಾಧನೆ ಮತ್ತು ವಿಶೇಷ ಪರಿಗಣನೆಯ ಸ್ವರೂಪದಲ್ಲಿತ್ತು. ಆದರೆ ಈ ನಿಲುವು ಏಕ ಸ್ವರೂಪದಲ್ಲಿರಲಿಲ್ಲ. ಡಿ.ಡಿ. ಕೋಸಂಬಿ ಯವರೇ

ಹೇಳುವಂತೆ, “ಶಿಲಾಯುಗದ ಎಲ್ಲ ದೇವತೆಗಳೂ ಸ್ತ್ರೀಯರೇ. ಪಶುಪಾಲನೆ ಆರಂಭಗೊಂಡು, ಪುರುಷರ ಕೈಗೆ ಸಂಪತ್ತು ಸೇರಿ ಹೋಗಿ ಪಿತೃಸ್ವಾಮ್ಯ ಸಮಾಜ ಹುಟ್ಟಿಕೊಂಡ ನಂತರದಲ್ಲಷ್ಟೇ ಪುರುಷ ದೇವತೆಗಳು ಬಂದದ್ದು ಅಲ್ಲದೆ, ಅದುವರೆಗಿನ ಹಳೆಯ ದೇವತೆಗಳನ್ನು ಈ ಹೊಸ ದೇವತೆಗಳ ಹೆಂಡಿರನ್ನಾಗಿ ಮಾಡಿ ಬಿಡಲಾಯಿತು”.[8]

ಹೀಗಾಗಿ ಪಶುಪಾಲನೆಯ ಹಂತದಲ್ಲಿಯೇ ಸ್ತ್ರೀಯ ಅಧೀನತೆಯು ಸಾಮಾಜಿಕ ವಾಸ್ತವವಾಗಿ ರೂಪುಗೊಳ್ಳತೊಡಗುತ್ತದೆ. ಸ್ತ್ರೀಯ ಸಂತಾನಾಭಿವೃದ್ಧಿ ಸಾಮರ್ಥ್ಯಕ್ಕೆ ಪುರುಷನೂ ಕಾರಣ ಎಂಬುದು ಸಾಬೀತಾದಾಗ ಸ್ತ್ರೀಗೆ ಇದ್ದ ಸಾಮಾಜಿಕ ‘ಮಾನ್ಯತೆಯು’ ಪುರುಷನಿಗೂ ಹಂಚಲ್ಪಡುತ್ತದೆ. ಮಗುವನ್ನು ಹೇರುವ ಸುಧೀರ್ಘ ಅವಧಿಯು ಪುರುಷ ಸ್ತ್ರೀಯನ್ನು ‘ರಕ್ಷಿಸುವ, ಕಾಪಾಡುವ, ಪೋಷಕನಾಗಿ’ ಪ್ರಧಾನ ಸ್ಥಿತಿಗೆ ಬಂದಂತೆ ಕಾಣುತ್ತದೆ. ಇನ್ನು ಕುಟುಂಬ ಮತ್ತು ವರ್ಗಾಧಾರಿತ ಊಳಿಗಮಾನ್ಯ ವ್ಯವಸ್ಥೆ ಬಂದ ಮೇಲೆ ಪ್ರಧಾನ ಮತ್ತು ಅಧೀನ ನೆಲೆಗಳು ಸ್ಪಷ್ಟಗೊಂಡವು. ಉತ್ಪಾದನಾ ಸಾಧನಗಳು ಪುರುಷನ ಕೈವಶವಾದ ಮೇಲೆ ಸಾಮಾಜಿಕ ಸಂಬಂಧಗಳು ನಿರ್ದಿಷ್ಟ ನಿಯಮಗಳ ಮೂಲಕ ನಿಯಂತ್ರಿಸ ಲ್ಪಡತೊಡಗಿದವು. ವರ್ಗನಿಷವಿ ಸಮಾಜವು ಪ್ರಧಾನ ಮತ್ತು ಅಧೀನ ಸ್ಥಿತಿಗಳನ್ನು ಸಾಮಾಜಿಕ ನಿಯಮಗಳ ಮೂಲಕ ನ್ಯಾಯಬದ್ಧಗೊಳಿಸಿತು. ವರ್ಗಬೇಧ ಮತ್ತು ಲಿಂಗಬೇಧಗಳು ಸಹಜವಾಗಿಯೇ ಮೈದಾಳಿದವು. ಸ್ತ್ರೀಯು ಸಮಾಜದಲ್ಲಿ ಪುರುಷನಿಷೆವಿಗೆ ಹೊರತಾದ ಯಾವುದೇ ಕ್ರಿಯೆಯಲ್ಲಿ ತೊಡಗಿದರೂ ಅದು ಅಪರಾಧವೆಂದು ಪರಿಗಣಿಸಲ್ಪಟ್ಟಿತು. ಈ ಕಾರಣಕ್ಕಾಗಿ ಸ್ತ್ರೀಗೆ ರಕ್ತಸಂಬಂಧ ಮತ್ತು ಸಾಮಾಜಿಕ ಸಂಬಂಧಗಳಿಗೆ ಸಂಬಂಧಪಟ್ಟ ನಿಯಮಗಳು ಜಾರಿಯಾದವು. ಏಕಪತಿತ್ವ ಮತ್ತು ಪಾತಿವ್ರತ್ಯಗಳೆಂಬ ನಿಯಮಗಳು ಮಹಿಳೆಯ ಸಾಮಾಜಿಕ ನೈತಿಕತೆಯನ್ನು ಅಳೆಯುವ ಪ್ರಧಾನ ಮಾನದಂಡಗಳಾದವು.

ಮುಂದೆ ಒಂದು ವ್ಯಕ್ತಿಯಾಗಿ ಸ್ತ್ರೀಗೆ ಸ್ವಾತಂತ್ರ್ಯಗಳೇ ಇಲ್ಲ ಎನ್ನುವ ಸಾಮಾಜಿಕ ಸ್ಥಿತಿ ರೂಪು ಗೊಂಡಿತು. ‘ನಾ ಸ್ತ್ರೀ ಸ್ವಾತಂತ್ರ್ಯ ಮರ್ಹತಿ’ ಎಂಬ ಕಾನೂನುಗಳು ಮಹಿಳೆಗೆ ಇರುವ ಮಾನವ ಸಹಜ ಸ್ವಚ್ಛಂದತೆಯನ್ನೇ ನಾಶಮಾಡಿದವು. ಆ ನಂತರದ ಸಾಮಾಜಿಕ ಸಂಬಂಧಗಳು ವರ್ಗಬೇಧ ಮತ್ತು ಲಿಂಗಬೇಧಗಳ ನೆಲೆಯಲ್ಲಿಯೇ ರೂಪುಗೊಂಡವು. ಇದರಿಂದಾಗಿ ಮಾತೃಪ್ರಧಾನತೆ, ಸ್ತ್ರೀ ಪ್ರಧಾನತೆ ಎಂಬ ಪರಿಕಲ್ಪನೆಗಳಿಗೆ ಆದಿಮ ಗಣ ಸಮಾಜದಲ್ಲಿ ಪುರಾವೆಗಳು ಲಭ್ಯವಾಗುವುದಿಲ್ಲ. ಮಾತೃಪ್ರಧಾನತೆ ಎಂಬ ಪರಿಕಲ್ಪನೆಯನ್ನು ಶೈಲಜಾ ಹಿರೇಮಠ ಹೀಗೆ ಮುಂದುವರೆಸುತ್ತಾರೆ. “ಹೆಣ್ಣನ್ನು ಮನುಷ್ಯಳನ್ನಾಗಿ ಗ್ರಹಿಸದೆ ‘ಮಾತೆ’ಯಾಗಿ ಅಂದರೆ ಪ್ರಜೋತ್ಪಾದಕ ಸರಕನ್ನಾಗಿ ಮಾತೃತ್ವವು ಗುರುತಿಸುತ್ತದೆ. ‘ಮಾತೆ’ ಯಾಗಿ ಸಾಮಾಜಿಕ ಸ್ಥಾನಮಾನ ಪಡೆಯುವ ಪ್ರಕ್ರಿಯೆಯೇ ಪಿತೃಪ್ರಧಾನತೆಯ ಪ್ರಾಬಲ್ಯವನ್ನು ಧ್ವನಿಸುತ್ತವೆ. ‘ಮಾತೃ’ ಎನ್ನುವುದು ಹೆಣ್ಣಿನ ಮಾತೃತ್ವವನ್ನು ಮಾತ್ರ ಪ್ರತಿನಿಧಿಸುತ್ತದೆ”[9] ಎನ್ನುತ್ತಾರೆ. ಹೆಣ್ಣನ್ನು ಒಂದು ವ್ಯಕ್ತಿಯಾಗಿ ಅಥವಾ ಮಾನವ ಜೀವಿಯಾಗಿ ನೋಡದೆ ಸಂತಾನಾಭಿವೃದ್ಧಿ ಸಾಮರ್ಥ್ಯದ ಕಾರಣಕ್ಕಾಗಿಯೇ ಆರಾಧಿಸುವ ಸಾಮಾಜಿಕ ನಡವಳಿಕೆಯು ಪುರುಷನಿಷವಿವಾದದ್ದು ಎಂಬುದು ಶೈಲಜಾ ಅವರ ಅಭಿಪ್ರಾಯವಾದಂತಿದೆ. ಇದರ ಮುಂದುವರಿಕೆಯಾಗಿ ಶೈಲಜಾ ಅವರು “ಮಾತೃಪ್ರಧಾನ ಸಿದ್ಧಾಂತವು ತಾಯಂದಿರ ಪರಾಧೀನತೆಯನ್ನು ಸಮರ್ಥಿಸುತ್ತದೆ. ಪುರುಷ ಪ್ರಧಾನ ಸಮಾಜದ ಈ ಬಗೆಯ ಮಾತೃತ್ವದ ನಿರ್ವಚನವನ್ನೇ ಮುಖ್ಯವಾಹಿನಿಯನ್ನಾಗಿಸಿಕೊಂಡ ಮಾತೃಪ್ರಧಾನ ಸಿದ್ಧಾಂತವು ಸ್ತ್ರೀ ನಿಷ್ಠವಾಗಿಲ್ಲ.....

ಸಾಂಪ್ರದಾಯಿಕ ಪುರುಷ ಗ್ರಹಿಕೆಗಳನ್ನು ಮುರಿದು ಹಾಕುವ ತಾಯಂದಿರ ಕುರಿತು ಮಾತೃಪ್ರಧಾನ ಸಿದ್ಧಾಂತವು ಚಕಾರವೆತ್ತುವುದಿಲ್ಲ. ಮಾತೃತ್ವವನ್ನು ಮುಂದು ಮಾಡುವ ಮಾತೃಪ್ರಧಾನ ಪರಿಕಲ್ಪನೆಯು ಪಿತೃಪ್ರಧಾನ ವ್ಯವಸ್ಥೆಯ ಒಂದು ಭಾಗವಾಗಿ ನಿಂತುಕೊಳ್ಳುತ್ತದೆ"[10] ಎನ್ನುತ್ತಾರೆ.

ಒಟ್ಟಾರೆ ಇಲ್ಲಿಯ ಸ್ತ್ರೀ ಪ್ರಧಾನತೆಯ ಕಲ್ಪನೆಯು ಆರಾಧಿಸುವ ಪುರುಷನ ಹಿತಾಸಕ್ತಿಯಿಂದ ಹುಟ್ಟಿದೆ ಎಂಬುದನ್ನು ನಾವು ಗ್ರಹಿಸಬೇಕಿದೆ. ಮಹಿಳೆಯನ್ನು ಆರಾಧಿಸುವ ಮತ್ತು ಒಲಿಸಿಕೊಳ್ಳುವ ಕ್ರಿಯೆಗಳು ಅಂತಿಮವಾಗಿ ಅವಳಿಗೆ ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಮಾಜಿಕಾಧಿಕಾರಗಳನ್ನು ಕಲ್ಪಿಸುವಲ್ಲಿ ಪರ್ಯವಸಾನಗೊಳ್ಳುವುದಿಲ್ಲ. ಆದಿ ಕಾಲದಿಂದ ಇಲ್ಲಿಯವರೆಗೆ ಸ್ತ್ರೀ ದೇವತೆಗಳನ್ನು ಪೂಜಿಸುವ, ಸ್ತ್ರೀಯನ್ನು ರಕ್ಷಿಸಬೇಕೆನ್ನುವ, ತನಗೆ ಆಶ್ರಯ ನೀಡಿದ ದೇಶವನ್ನು 'ಮಾತೆ' ಎಂದು ಭಾವಿಸುವ ಮತ್ತು ಭಾಷೆ, ನೆಲ, ಜಲಗಳನ್ನು ಸ್ತ್ರೀ ದೇವತೆಯ ರೂಪದಲ್ಲಿ ಪರಿಭಾವಿಸಿ ಪೂಜಿಸುವ ಸಂಸ್ಕೃತಿಯ ಜನರು ಯಾವತ್ತೂ ಸ್ತ್ರೀ ಅಧಿಕಾರ ವ್ಯವಸ್ಥೆಯನ್ನು ಸಹಿಸಿಲ್ಲ. ಈ ಕಾರಣದಿಂದಾಗಿ ಆದಿಮ 'ಗಣ' ಸಮಾಜದಲ್ಲಿ ಸ್ತ್ರೀ ಸಮಾನವಾಗಿ ಪರಿಗಣಿಸಲ್ಪಟ್ಟಿದ್ದಳೇ ವಿನಹ, ಅವಳಿಗೆ ವಿಶೇಷ ಸಾಮಾಜಿಕ ಅಧಿಕಾರಗಳೇನಿರಲಿಲ್ಲ ಎಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು**


1. ಎಂಗೆಲ್ಸ್, ಎಫ್. (1884). ದಿ ಆರಿಜಿನ್ ಆಫ್ ದಿ ಫ್ಯಾಮಿಲಿ, ಪ್ರೈವೇಟ್ ಪ್ರಾಪರ್ಟಿ ಅಂಡ್ ದಿ ಸ್ಟೇಟ್. ಪು. 17
2. ಮಾರ್ಗನ್, ಎಲ್. ಹೆಚ್. (1964). ಏನ್ಸಿಯೆಂಟ್ ಸೊಸೈಟಿ. ಹಾರ್ವರ್ಡ್ ಯೂನಿವರ್ಸಿಟಿ ಪ್ರೆಸ್ ಎಬೂಕ್ಸ್. ಪು. 33
3. ಅದೇ ಪು. 79–80
4. ಕೋಸಂಬಿ. ಡಿ. ಡಿ. (1998). *ಪ್ರಾಚೀನ ಭಾರತದ ಚರಿತ್ರೆ.* ಪು. 32–33
5. ಎಂಗೆಲ್ಸ್, ಎಫ್. (1884). ಪೂರ್ವೋಕ್ತ. ಪು.81–82
6. ದೇವಿಪ್ರಸಾದ್ ಚಟ್ಟೋಪಾಧ್ಯಾಯ. (2004). *ಮಾತೆಯರು ಮಾನ್ಯರಾಗಿದ್ದಾಗ.* ಪು. 30–31
7. ಅದೇ ಪು.45
8. ಎಂಗೆಲ್ಸ್, ಎಫ್. (1884). ಪೂರ್ವೋಕ್ತ. ಪು.82
9. ಛಾಯಾದಾತರ್ (ಅನು.) (1992). *ಸ್ತ್ರೀ–ಪುರುಷ, ಸರಸ್ವತಿ ರಿಸಬುಡ್,* ಪು.52
10. ಕೋಸಂಬಿ. ಡಿ. ಡಿ. (1998). ಪೂರ್ವೋಕ್ತ. ಪು.33